UASB LIBRARY
Newspaper Clippings
Pg .1 Monday 08-11-2021 Jai Kisan



ಜಾಗತಿಕ ಮಟ್ಟದಲ್ಲಿ ಇಂದಿಗೂ 720-810 ದಶಲಕ್ಷ ಜನಸಂಖ್ಯೆ ಹಸಿವಿನಿಂದ ಬಳಲುತ್ತಿದ್ದು, ಪ್ರತಿಶತ 12ರಷ್ಟು ಜನಸಂಖ್ಯೆ ತೀವ್ರ ರೀತಿಯ ಆಹಾರ ಅಭದ್ರತೆ ಎದುರಿಸುತ್ತಿದೆ. ಅದರಲ್ಲೂ ವಿಶೇಷವಾಗಿ ಏಷ್ಯಾ ಖಂಡದ ಅರ್ಧದಷ್ಟು ಜನಸಂಖ್ಯೆಯನ್ನು ಅಪೌಷ್ಟಿಕತೆ ಕಾಡುತ್ತಿದೆ. ಹೀಗಾಗಿ ಜಾಗತಿಕವಾಗಿ ಅನ್ನದ ಬಟ್ಟಲು ತುಂಬಿಸುವ ನಿಟ್ಟಿನಲ್ಲಿ ನಮ್ಮ ಕೃಷಿ ಕ್ಷೇತ್ರವನ್ನು ಬಲಪಡಿಸುವುದು ಮತ್ತು ಅಧಿಕ ಉತ್ಪಾದನೆಯ ಜತೆ ಪೌಷ್ಟಿಕಯುಕ್ತ ಆಹಾರಕ್ಕೆ ಹೆಚ್ಚಿನ ಒತ್ತು ನೀಡುವುದು ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಾಗಿದೆ.



ಆಹಾರದ ಬಟ್ಟಲು ತುಂಬುವ ಸವಾಲು



ಡಾ. ಕೆ.ಪಿ. ರಘುಪ್ರಸಾದ್



ಭಾರತದ ಕೃಷಿಗೆ ತನ್ನದೇ ಆದ ಇತಿಹಾಸ ಹಾಗೂ ವೈವಿಧ್ಯತೆ ಇದೆ. ಶೇ.17.60 ಜಾಗತಿಕ ಜನಸಂಖ್ಯೆಯನ್ನು ಹೊಂದಿರುವ ನಮ್ಮ ರಾಷ್ಟ್ರ ಶೇ.15 ಜಾನುವಾರುಗಳ ಸಂಖ್ಯೆಯನ್ನೂ ಹೊಂದಿದೆ. ಜಗತ್ತಿನ ಒಟ್ಟು ಭೌಗೋಳಿಕ ಕ್ಷೇತ್ರದಲ್ಲಿ ಶೇ. 2.4 ಕ್ಷೇತ್ರ ಹಾಗೂ 4.2 ಪ್ರತಿಶತ ಜಲ ಸಂಪನ್ಮೂಲ ಹೊಂದಿದೆ. ಇವುಗಳನ್ನು ಬಳಸಿಕೊಂಡು ಈಗಾಗಲೆ 142 ಮಿ. ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲಾಗಿದ್ದು, ಪ್ರತಿಶತ 44 ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಇದರ ಫಲಶ್ರುತಿ ಎಂಬಂತೆ ಪ್ರಸ್ತುತ ಒಟ್ಟು ದೇಶೀಯ ಉತ್ಪಾದನೆಯಲ್ಲಿ ಕೃಷಿ ಕ್ಷೇತ್ರದ ಪಾಲು ಶೇ.17.8 ಇದ್ದು, ಇದು ರಾಷ್ಟ್ರದ ಒಟ್ಟಾರೆ ದೃಷ್ಟಿಯಿಂದ ಉತ್ತಮ ಬೆಳವಣಿಗೆಯಾಗಿದೆ. ಪ್ರಸ್ತುತ ರಾಷ್ಟ್ರದ ಕೃಷಿ ಉತ್ಪಾದನೆ ತೀವ್ರಗತಿಯಲ್ಲಿಯೇ ಮುಂದುವರಿದಿದ್ದು, 309 ಮಿಲಿಯನ್ ಟನ್ ಆಹಾರ ಬೆಳೆಗಳಿಂದ, 326 ಮಿ. ಟನ್ ತೋಟಗಾರಿಕಾ ಬೆಳೆಗಳಿಂದ, 187 ಮಿ. ಟನ್ ಹೈನುಗಾರಿಕೆಯಿಂದ, ಅದೇರೀತಿ 82 ಮಿ. ಟನ್ ಮಾಂಸ, ಮೀನು, ಮೊಟ್ಟೆಗಳಿಂದ ಉತ್ಪಾದನೆಯಾಗುತ್ತಿದ್ದು, ಒಟ್ಟಾರೆ 900 ಮಿ. ಟನ್ ನಮ್ಮ ರಾಷ್ಟ್ರದ ಕೃಷಿ ಕ್ಷೇತ್ರದ ಉತ್ಪಾದನೆಯಾಗಿದೆ. ಇದು ಏಷ್ಯಾದ ಶೇ.23 ಹಾಗೂ ಜಾಗತಿಕ ಮಟ್ಟದ ಶೇ. 11 ಉತ್ಪಾದನೆಯಾಗಿರುತ್ತದೆ. ಹಾಗಿದ್ದರೂ 2030ನೇ ಸಾಲಿಗೆ 350 ಮಿ. ಟನ್ ಹಾಗೂ 2050ಕ್ಕೆ 405 ಮಿ. ಟನ್ ಆಹಾರದ ಉತ್ಪಾದನೆಯ ಅಗತ್ಯ ಇದ್ದು, ಈ ನಿಟ್ಟಿನಲ್ಲಿ ಹೊಸ ಪ್ರಯತ್ನಗಳು ನಡೆಯಬೇಕಿದೆ. ಈ ಗುರಿ ಮುಟ್ಟುವಲ್ಲಿ ನಮ್ಮ ಆಹಾರ ಉತ್ಪಾದನಾ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆ ಅವಶ್ಯಕತೆ ಇದ್ದು ಲಭ್ಯವಿರುವ ಹಿಡುವಳಿಯಲ್ಲಿಯೇ ಹೆಚ್ಚಿನ ಇಳುವರಿ ತೆಗೆಯುವ ಜತೆಗೆ, ಕಾರ್ಬೋಹೈಡ್ರೇಟ್‌ನಿಂದ ಪ್ರೋಟೀನ್‌ಯುಕ್ತ ಆಹಾರದತ್ತ ಒತ್ತು ನೀಡಬೇಕಾಗಿದೆ. ಇದರ ಜತೆಗೆ ರೈತರ ಸಾಮಾಜಿಕ, ಆರ್ಥಿಕ ಸ್ಥಿತಿಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆಯಾಗಬೇಕಾಗಿದ್ದು, ಭಾರತ ಸರ್ಕಾರದ ಕೃಷಿಕರ ಆದಾಯ ದ್ವಿಗುಣಗೊಳಿಸುವ ಕಾರ್ಯಕ್ರಮ ಹೆಚ್ಚು ಪ್ರಸ್ತುತವಾಗಿದೆ. ಇದನ್ನು ಸಾಧಿಸುವಲ್ಲಿ ಸೆಕೆಂಡರಿ ಅಗ್ರಿಕಲ್ಚರ್ ಅಂದರೆ ಕೋಯ್ಲೋತ್ತರ ಕೃಷಿಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಅದರಲ್ಲೂ ವಿಶೇಷವಾಗಿ ಸಂಸ್ಕರಣೆ, ಮೌಲ್ಯವರ್ಧನೆ, ಬ್ರ್ಯಾಂಡಿಂಗ್,ರಫ್ತು ಅವಕಾಶಗಳ ಸದ್ಬಳಕೆ ಮುಂತಾದವುಗಳು ಭವಿಷ್ಯದ ಆಯ್ಕೆಗಳಾಗಿದೆ.

ಉದ್ಯಮಶೀಲತೆ ಭರವಸೆ

ಕೃಷಿ ಕ್ಷೇತ್ರ ಬದಲಾವಣೆಯ ಕಾಲಚಕ್ರದ ಭಾಗವಾಗಿದೆ. ಪ್ರಸ್ತುತ ಎಲ್ಲೋ ಒಂದೆಡೆ ಸಾಂಪ್ರದಾಯಿಕ ಕೃಷಿಯಿಂದ ಇತ್ತೀಚಿನ ಆವಿಷ್ಕಾರಗಳಾದ ನಿಖರ ಕೃಷಿ, ಡಿಜಿಟಲ್ ಕೃಷಿ, ಮಾಹಿತಿ ತಂತ್ರಜ್ಞಾನಗಳ ಬಳಕೆ, ರೊಬೋಟಿಕ್ಸ್, ಬ್ಲಾಕ್ ಚೈನ್ ತಾಂತ್ರಿಕತೆ, ಬಿಗ್‌ಡಾಟಾ, ಹೈಡ್ರೋಫೋನಿಕ್ಸ್ ಗಳ ಬಳಕೆಗೂ ಒತ್ತು ನೀಡಲಾಗುತ್ತಿದೆ. ತನ್ಮೂಲಕ ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚಿನ ಸ್ಪರ್ಧೆ ಸಾಧ್ಯ. ಇದಕ್ಕೆ ಪೂರಕವಾಗಿ ಕೃಷಿಯನ್ನು ಉದ್ಯಮವನ್ನಾಗಿ ಪರಿಗಣಿಸುವುದು ಆಧುನಿಕ ಅನಿವಾರ್ಯತೆಗಳಲ್ಲಿ ಮತ್ತೊಂದು. ಜೀವನಕ್ಕಾಗಿ ಕೃಷಿ ಎನ್ನುವ ಪರಿಕಲ್ಪನೆಯಿಂದ ಇಂದು ಮಾರುಕಟ್ಟೆ ಆಧಾರಿತ ಕೃಷಿ ಕಡೆ ಬದಲಾವಣೆಗಳು ಆರಂಭವಾಗಿದ್ದರೂ ಕೃಷಿಕರ ಆದಾಯದಲ್ಲಿ ನಿರೀಕ್ಷಿತ ಹೆಚ್ಚಳ ಸಾಧ್ಯವಾಗದಿದ್ದಾಗ ಉದ್ಯಮಶೀಲತೆ ಒಂದು ಭರವಸೆಯ ಬೆಳಕನ್ನು ಮೂಡಿಸಿದೆ. ಪ್ರಸ್ತುತ ಕೃಷಿಯಲ್ಲಿಯೂ ಯೋಜಿತ ಚಟುವಟಿಕೆಗಳು, ಸಂಪನ್ಮೂಲಗಳ ಸಮರ್ಪಕ ನಿರ್ವಹಣೆ, ಅಧಿಕ ಇಳುವರಿ ಸಾಗರದಾಚೆಗಿನ ಮಾರುಕಟ್ಟೆ ಅವಕಾಶಗಳನ್ನು ಹುಡುಕಿಕೊಂಡಾಗ ಮಾತ್ರ ಲಾಭಾಂಶದಲ್ಲಿ ಹೆಚ್ಚು ಮಾಡಲು ಸಾಧ್ಯ. ಹಾಗಾದಾಗ ಕೃಷಿಯತ್ತ ಬಂಡವಾಳವೂ ಹರಿದುಬರಲಿದೆ. ಒಟ್ಟಾರೆ ಕೃಷಿ ಕ್ಷೇತ್ರದ ಹೊಸ ಅವಕಾಶಗಳಿಗೆ ಎಲ್ಲರೂ ಮುಕ್ತರಾಗಬೇಕಾಗಿದ್ದು, ಕೃಷಿ ಪ್ರತಿಯೊಬ್ಬರಿಗೂ ಸಂಬಂಧಿಸಿದ ಚಟುವಟಿಕೆಯಾಗಬೇಕಾಗಿದೆ. ಆಗ ಮಾತ್ರ ಭವಿಷ್ಯದ ಕೃಷಿ ಉಜ್ವಲವಾಗಲು ಸಾಧ್ಯ.



ಸಣ್ಣ, ಅತಿ ಸಣ್ಣ ಹಿಡುವಳಿ ಪ್ರಮುಖ

ಭಾರತದ ಕೃಷಿ ಕ್ಷೇತ್ರದ ಪ್ರಮುಖ ಸವಾಲುಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿಗಳು ಪ್ರಮುಖವಾಗಿವೆ. ರಾಷ್ಟ್ರವು ಪ್ರತಿಶತ 87 ಸಣ್ಣ ಮತ್ತು ಅತಿ ಸಣ್ಣ ಕೃಷಿಕರನ್ನೇ ಹೊಂದಿದ್ದು, ಆಹಾರ ಉತ್ಪಾದನೆಯಲ್ಲಿ ಇವರ ಕೊಡುಗೆ ಶೇ. 68 ರಷ್ಟು ಇದೆ. ಈ ವರ್ಗದ ಜನರನ್ನು ಇನ್ನೂ ಹೆಚ್ಚು ಸಶಕ್ತರನ್ನಾಗಿಸಲು ಕಾರ್ಯಕ್ರಮಗಳ ಅಗತ್ಯವಿದೆ. ಈ ನಿಟ್ಟಿನಲ್ಲಿ ಈ ವರ್ಗದ ಕೃಷಿಕರಿಗೆ ಸೂಕ್ತವಾದ ತಂತ್ರಜ್ಞಾನಗಳ ಅಭಿವೃದ್ಧಿ, ಕೈಗೆಟುಕುವ ಯಂತ್ರೋಪಕರಣಗಳ ಬಳಕೆ, ಸಂಘಟಿತ ಮಾರಾಟಕ್ಕೆ ಉತ್ತೇಜನ ನೀಡಬೇಕಾಗಿದೆ.

(ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕೃಷಿ ತಂತ್ರಜ್ಞಾನ ಮತ್ತು ಮಾಹಿತಿ ಕೇಂದ್ರದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು)

"Beautiful things happen when you distance yourself from negativity"

ಕಾಫಿ ನಾಡಿನಲ್ಲಿ ಅಸ್ಸಾಂ ಕಾರ್ಮಿಕರ ಕೊಯ್ಲು ಗುಮಾನಿ ಹುಟ್ಟಿಸಿದ ನಡೆ

ಮಲೆನಾಡ ಅಡಕೆಯಲ್ಲಿ ಬೈನೆ ಬೀಜ ಕಲಬೆರಕೆ?

■ ಚೇತನ್ ಪದ್ಮಸಾಲಿ ಚಿಕ್ಕಮಗಳೂರು

ಕಾಫಿ ನಾಡಿನಲ್ಲಿ ಬೈನೆ ಬೀಜಕ್ಕೆ ಬೇಡಿಕೆ ಹೆಚ್ಚಾಗಿದೆ. ಅಸ್ಸಾಂನಿಂದ ಬಂದವರು ಕಾಫಿ ತೋಟಗಳಲ್ಲಿರುವ ಬೈನೆ ಬೀಜ ಸಂಗ್ರಹಿಸುತ್ತಿದ್ದು, ಇದನ್ನು ಎಲ್ಲಿಗೆ ಮತ್ತು ಏಕೆ ಕೊಂಡೊಯ್ಯುತ್ತಿದ್ದಾರೆ ಎಂಬುದೇ ರಹಸ್ಯವಾಗಿದೆ.

ಈ ಹಿಂದೆ ಬೈನೆ ಮರದಿಂದ ತೆಗೆದ ಸೇಂದಿಗೆ ಜನ ಮುಗಿಬೀಳುತ್ತಿದ್ದರು. ಆನೆಗಳಿಗೂ ಬೈನೆ ಮರ ಇಷ್ಟ. ಇಂಥ ಮರದ ಬೀಜವನ್ನು ಹೊರ ರಾಜ್ಯದಿಂದ ಬಂದವರು ಖರೀದಿಸುತ್ತಿದ್ದಾರೆ. ಚಿಕ್ಕಮಗಳೂರು ತಾಲೂಕು ಉಳುವಾಗಿಲು ಸುತ್ತಮುತ್ತಲಿನ ಬಹುತೇಕ ಕಾಫಿ ತೋಟಗಳಲ್ಲಿ ಬೈನೆ ಬೀಜ ಖರೀದಿಸಿದ್ದಾರೆ. ಒಂದು ಗೊಂಚಲಿಗೆ ನೂರರಿಂದ ಇನ್ನೂರು ರೂ. ವರೆಗೆ ನೀಡುತ್ತಿದ್ದಾರೆ. ಕಾಫಿ ತೋಟದಲ್ಲಿರುವ ಬೈನೆ ಮರದ ಬೀಜಗಳನ್ನು ಕೊಯ್ಯಲು ಉಳುವಾಗಿಲು ಸೇರಿದಂತೆ ಕೆಲವೆಡೆ ಅನುಮತಿ ನೀಡಲಾಗಿದೆ. ಲೋಡ್‌ಗಟ್ಟಲೇ ಬೈನೆ ಗೊಂಚಲುಗಳನ್ನು ಕತ್ತರಿಸಲಾಗಿದೆ. ವಾರದ ಹಿಂದೆ ಕೊಯ್ದ ಬೀಜಗಳನ್ನು ಸ್ವಚ್ಛಗೊಳಿಸಿ ಸಾಗಣೆಗೆ ತಯಾರಿ ನಡೆಸಲಾಗುತ್ತಿದೆ. ಬೈನೆ ಬೀಜವನ್ನು ಅಡಕೆಯೊಂದಿಗೆ ಮಿಶ್ರಣ ಮಾಡುವ ಅನುಮಾನವೂ ಹೆಚ್ಚಾಗುತ್ತಿದೆ. ಬೈನೆ ಬೀಜದಲ್ಲಿ ಅಮಲು ಭರಿಸುವ ಗುಣವಿರುತ್ತದೆ. ಹಾಗಾಗಿ ಇದನ್ನು ಗುಟ್ಟಾದಲ್ಲಿ ಅಡಕೆ ಬದಲು ಬಳಸುತ್ತಿದ್ದಾರೆಯೇ ಎಂಬ ಶಂಕೆಯೂ ವ್ಯಕ್ತವಾಗಿದೆ. ಒಂದು ಬೈನೆ ಬೀಜ ಎರಡರಿಂದ ಮೂರು ಅಡಕೆ ತೂಕಕ್ಕೆ ಸಮ. ಹೀಗಾಗಿ ಗುಟ್ಟಾದಲ್ಲಿ ಮಿಶ್ರಣ ಮಾಡಿದರೆ ಅಡಕೆ ಬೇಡಿಕೆ ಕುಸಿಯಲಿದೆ.



ಚಿಕ್ಕಮಗಳೂರು ತಾಲೂಕು ಉಳುವಾಗಿಲು ಗ್ರಾಮದಲ್ಲಿ ಅಸ್ಸಾಂ ಕಾರ್ಮಿಕರು ಬೈನೆ ಬೀಜ ಕೊಯ್ಲು ಮಾಡಿರುವುದು.

3 ವರ್ಷಕ್ಕೊಮ್ಮೆ ಅರಳುವ ಹೂ

ಬೈನೆ ಬೀಜ ಬಿಡುವುದು ಮೂರು ವರ್ಷಕ್ಕೊಮ್ಮೆ ಎನ್ನುತ್ತಾರೆ ಸ್ಥಳೀಯರು. ಮೊದಲ ವರ್ಷದಲ್ಲಿ ಹೂವು ಅರಳುತ್ತವೆ. ಎರಡನೇ ವರ್ಷ ಬಲಿತು ಗೊಂಚಲಾಗುತ್ತದೆ. ಮೂರನೇ ವರ್ಷ ಬೈನೆ ಬೀಜಗಳು ಕಾಣಿಸಿಕೊಳ್ಳುತ್ತದೆ.

15 ವರ್ಷಗಳ ಹಿಂದೆ ಕಾಫಿ ಬೀಜದ ಜತೆ ಬೈನೆ ಬೀಜ ಮಿಶ್ರಣ ಮಾಡುತ್ತಿದ್ದರು. ಬೈನೆ ಬೀಜ ರಫ್ತಿಗೆ ಅನುಮತಿ ಇಲ್ಲ. ತೋಟದಲ್ಲಿರುವ ಮರ ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿದ್ದರೂ ಬೈನೆ ಉತ್ಪನ್ನ ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಸರ್ಕಾರಕ್ಕೆ ಪತ್ರ ಬರೆದು ಅಲ್ಲಿಂದ ಬರುವ ನಿರ್ದೇಶನ ಪಾಲಿಸಲಾಗುವುದು. ಯಾರಾದರೂ ದೂರು ನೀಡಿದರೆ ಕ್ರಮ ಕೈಗೊಳ್ಳಲಾಗುವುದು.

| ಕ್ರಾಂತಿ ಚಿಕ್ಕಮಗಳೂರು ಡಿಎಫ್‌ಒ

ಬಾಂಗ್ಲಾಗೆ ರವಾನೆ?

ಹಿಂದಿಯಲ್ಲಿ ಮಾತನಾಡುವವರು ತೋಟದ ಮಾಲೀಕರನ್ನು ಸಂಪರ್ಕಿಸಿ ಬೈನೆ ಬೀಜ ಬೇಕೆಂದು ಕೇಳುತ್ತಿದ್ದಾರೆ. ಆದರೆ, ಎಲ್ಲಿಗೆ ಸಾಗಿಸುತ್ತಿದ್ದಾರೆ, ಯಾವುದಕ್ಕೆ ಬಳಸುತ್ತಿದ್ದಾರೆ ಎಂಬ ಯಾವುದೇ ಮಾಹಿತಿ ಇಲ್ಲ. ಕಾರ್ಮಿಕರನ್ನು ಸಂಪರ್ಕಿಸಿದಾಗ ನಮ್ಮ ಮಾಲೀಕರು ಅಸ್ಸಾಂನಲ್ಲಿದ್ದಾರೆ. ಅವರಿಗೆ ಗೊತ್ತು, ನಾವು ಕೊಯ್ದು ಕಳಿಸುತ್ತೇವೆ ಎಂದಷ್ಟೇ ಹೇಳಿದ್ದಾರೆ. ಇವರು ಅಸ್ಸಾಂ ಅಥವಾ ಬಾಂಗ್ಲಾಗೆ ಸಾಗಿಸುತ್ತಿದ್ದಾರಾ ಎಂಬ ಅನುಮಾನ ಕಾಡುತ್ತಿದೆ. ಅಡಕೆಗೆ ದರ ಹೆಚ್ಚಿರುವಾಗ ಬೈನೆ ಬೀಜ ಮಿಶ್ರಣ ಮಾಡುತ್ತಾರೆಂಬ ಅನುಮಾನವೂ ಇದೆ.

ವಿಜಯವಾಣಿ ರೈತ ಮಿತ್ರ

■ **ಕೃಷಿ ಭೂಮಿ ಮೇಲೆ ಬಿಳಿ ಉಪ್ಪು ಎದ್ದು ಕಾಣುತ್ತಿದ್ದು, ಇಳುವರಿ ಬರುತ್ತಿಲ್ಲ. ಇದಕ್ಕೆ ಪರಿಹಾರ ತಿಳಿಸಿ?**

| ಪ್ರಶಾಂತ್ ಸಂತೇಬೆನ್ನೂರು, ದಾವಣಗೆರೆ ತಾಲೂಕು

ಮಣ್ಣಿನಲ್ಲಿ ಉಪ್ಪಿನಾಂಶ ಇದೆಯೆಂದರೆ ಇದನ್ನು ಸಮಸ್ಯಾತ್ಮಕ ಮಣ್ಣು ಎನ್ನುತ್ತೇವೆ. ಇದು ಸವಳು ಅಥವಾ ಚೌಳು ಮಣ್ಣಾಗಿದ್ದು, ಇದರಲ್ಲಿ ಕ್ಯಾಲ್ಸಿಯಂ ಸಲ್ಫೇಟ್, ಮ್ಯಾಗ್ನಿಷಿಯಂ ಸಲ್ಫೇಟ್, ಕ್ಯಾಲ್ಸಿಯಂ ಕ್ಲೋರೈಡ್ ಮತ್ತು ಮ್ಯಾಗ್ನಿಷಿಯಂ ಕ್ಲೋರೈಡ್ ಅಂಶಗಳು ಹೆಚ್ಚಿರುತ್ತವೆ.

ನಿರ್ವಹಣೆ: ಬಸಿಗಾಲುವೆಗಳ ನಿರ್ಮಾಣ ಮಾಡಿ ಶುದ್ಧ ನೀರನ್ನು ನೀಡಿ ಲವಣಗಳನ್ನು ಬಸಿಯುವುದು; ಹಸಿರೆಲೆ ಗೊಬ್ಬರಗಳನ್ನು ಮಣ್ಣಿಗೆ ಸೇರಿಸುವುದು ಅಥವಾ ಪ್ರತಿ ಎಕರೆಗೆ ಐದು ಟನ್ ನೆಲಗಡಲೆ ಸಿಪ್ಪೆ ಅಥವಾ ಭತ್ತದ ಜಳ್ಳನ್ನು ಮಣ್ಣಿಗೆ ಸೇರಿಸುವುದು; ಮಣ್ಣಿಗೆ ಸಾಕಷ್ಟು ಸಾವಯವ ಗೊಬ್ಬರಗಳನ್ನು ಸೇರಿಸುವುದು; ಲವಣ ಸಹಿಷ್ಣುತೆ ಬೆಳೆಗಳನ್ನು ಬೆಳೆಯುವುದು ಉತ್ತಮ. ಉದಾ. ಭತ್ತದ ತಳಿಗಳಾದ ಗಂಗಾವತಿ ಸೋನ, ಐ.ಆರ್. 30864, ಐ.ಆರ್. 20 ಸೂಕ್ತ. ಶಿಫಾರಸು ಮಾಡಿದ ಪ್ರಮಾಣಕ್ಕಿಂತ ಶೇ.25 ಹೆಚ್ಚಿನ ಪ್ರಮಾಣದ ಸಾರಜನಕ ಮತ್ತು ರಂಜಕ ಬಳಸಿ, ಸಸಿಗಳು ಲವಣಗಳ ಸಾರದಿಂದ ಸಾಯುವುದನ್ನು ತಪ್ಪಿಸಲು ಬಲಿತ (30-35 ದಿನಗಳ) ಪೈರನ್ನು ನಾಟಿಗೆ ಉಪಯೋಗಿಸಿ.

| ಡಾ. ಕೃಷ್ಣಮೂರ್ತಿ ಆರ್. ಮಣ್ಣು ವಿಜ್ಞಾನಿ

■ **ಕಪ್ಪು ಬೂಷ್ಟು (ಸೂಟಿ ಮೋಲ್ಡ್) ರೋಗ ನಿಯಂತ್ರಿಸುವುದು ಹೇಗೆ?**

| ರಾಜೇಂದ್ರ ಬೇಲೂರು, ಹಾಸನ

ಕಪ್ಪು ಬೂಷ್ಟು ಒಂದು ಶಿಲೀಂಧ್ರ ರೋಗ. ಕೀಟಗಳು ಸ್ರವಿಸಿದ ಅಂಟು ದ್ರವದ ಮೇಲೆ, ಎಲೆ, ಹಣ್ಣು, ಕಾಂಡಗಳ ಮೇಲೆಲ್ಲ ಕಪ್ಪು ಶಿಲೀಂಧ್ರದ ಬೆಳವಣಿಗೆ ಕಂಡು ಬಂದು ಟೊಂಗೆಗಳು ನಿಸ್ತೇಜವಾಗಿ ಕಾಣುತ್ತವೆ.

ಹತೋಟಿ: ಶೇ.80 ನೀರಿನಲ್ಲಿ ಕರಗುವ ಗಂಧಕ 3 ಗ್ರಾಂ ಪ್ರತಿ ಲೀ. ನೀರಿಗೆ ಅಥವಾ ಶೇ.2 ಸ್ಟಾರ್ಚ್ (ಪಿಷ್ಟ) (20 ಗ್ರಾಂ ಪ್ರತಿ ಲೀ.ನೀರಿಗೆ) ಅನ್ನು ಸಿಂಪಡಿಸಬೇಕು. ನಂತರ ಕೀಟ/ರೋಗ ಬಾಧೆ ಕಂಡು ಬಂದ ಗಿಡಗಳಿಗೆ 1.7 ಮಿ.ಲೀ. ಡೈಮಿಥೋಯೇಟ್ 30 ಇ.ಸಿ./2 ಮಿ.ಲೀ. ಮೆಲಾಥಿಯಾನ್ 50 ಇ.ಸಿ. ಜತೆಗೆ 2 ಗ್ರಾಂ ಜೈನೆಬ್ ಅಥವಾ ಮ್ಯಾಂಕೋಜೆಬ್ 75 ಡಬ್ಲ್ಯು.ಪಿ. ಅನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಣೆ ಮಾಡಬೇಕು.

| ಬಿ. ಪ್ರಿಯಾಂಕ ಸಸ್ಯರೋಗ ತಜ್ಞರು

■ **ಬಹು ಕಟಾವು ಮೇವಿನ ಜೋಳದ ಬಗ್ಗೆ ಮಾಹಿತಿ ನೀಡಿ.**

| ಸ್ವಾತಿ ಮಲ್ಲಾಪುರ, ಚಿತ್ರದುರ್ಗ

ಸಿ.ಓ.ಎಫ್.ಎಸ್. 29 ಅಥವಾ ಸಿ.ಓ.ಎಫ್.ಎಸ್. 31 ಇವು ಬಹು ಕಟಾವು ಮೇವಿನ ಜೋಳದ ತಳಿಗಳು. ಇವುಗಳನ್ನು ನೀರಾವರಿಯಲ್ಲಿ ವರ್ಷವಿಡಿ ಬೆಳೆಯಬಹುದು.

ಬೇಸಾಯ ಕ್ರಮಗಳು: 10 ಟನ್ ಕೊಟ್ಟಿಗೆ ಗೊಬ್ಬರವನ್ನು ಪ್ರತಿ ಎಕರೆಗೆ ಸೇರಿಸಿ ಸಾಲಿನಿಂದ ಸಾಲಿಗೆ ಒಂದು ಅಡಿ, ಗಿಡದಿಂದ ಗಿಡಕ್ಕೆ ಅರ್ಧ ಅಡಿ ಅಂತರದಲ್ಲಿ ಬಿತ್ತನೆ ಮಾಡುವುದು. ಬಿತ್ತನೆ ಸಮಯದಲ್ಲಿ 35 ಕಿ.ಗ್ರಾಂ ಡಿ.ಎ.ಪಿ., 30 ಕಿ.ಗ್ರಾಂ ಯೂರಿಯಾ ಮತ್ತು 30 ಕಿ.ಗ್ರಾಂ ಎಂ.ಒ.ಪಿ. (ಪೊಟ್ಯಾಷ್) ಅನ್ನು ಸಾಲಿಗೆ ಸೇರಿಸಬೇಕು. ಬಿತ್ತಿದ 30 ದಿನದ ನಂತರ 40 ಕಿ.ಗ್ರಾಂ ಯೂರಿಯಾವನ್ನು ಮೇಲು ಗೊಬ್ಬರವಾಗಿ ನೀಡಬೇಕು. ಪ್ರತಿ ಬಾರಿ ಮೇವನ್ನು ಕಟಾವು ಮಾಡಿದ ನಂತರ 40 ಕಿ.ಗ್ರಾಂ ಯೂರಿಯಾವನ್ನು ಮತ್ತೆ ಮೇಲು ಗೊಬ್ಬರವಾಗಿ ಮಣ್ಣಿಗೆ ಸೇರಿಸುವುದು. ಒಂದು ವರ್ಷದ ನಂತರ (6/7ನೇ ಕಟಾವಿನ) 35 ಕಿ.ಗ್ರಾಂ ಡಿ.ಎ.ಪಿ., 30 ಕಿ.ಗ್ರಾಂ ಯೂರಿಯಾ, 30 ಕಿ.ಗ್ರಾಂ ಎಂ.ಒ.ಪಿ. ಮಣ್ಣಿಗೆ ಸೇರಿಸಿ

ಕಟಾವು: ಬಿತ್ತಿದ 65-70 ದಿನಕ್ಕೆ ಮೊದಲ ಕಟಾವು ಮಾಡುವುದು. ನಂತರ ಹೂ ಬಿಡುವಿಕೆಗೆ ಅನುಸಾರ 45-50 ದಿನಕ್ಕೆ ಕೂಳೆ ಬೆಳೆ ಕಟಾವು ಮಾಡುವುದು.

ಇಳುವರಿ: ಸಿ.ಓ.ಎಫ್.ಎಸ್.29ರಲ್ಲಿ 60-65 ಮತ್ತು ಸಿ.ಓ.ಎಫ್.ಎಸ್. 31ರಲ್ಲಿ 75-80 ಟನ್ ಪ್ರತಿ ಎಕರೆಗೆ, ಪ್ರತಿ ವರ್ಷ ಪಡೆಯಬಹುದು.

| ಹರ್ಷಕುಮಾರ್ ಎಸ್.ಎಸ್. ಬೇಸಾಯ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

08-11-2021 Vv Pg 11

For more information visit University Library Website
Web - uasbagrilibindia.org
E-mail- librarian@uasbangalore.edu.in

ಕರೊನಾ ಸಂಕಷ್ಟದ ದಿನಗಳಲ್ಲಿ ಯುವ ಸಮುದಾಯ ಕೃಷಿಯತ್ತ ವಾಲಿದ್ದು, ಹಲವಾರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡು ಬದುಕು ರೂಪಿಸಿಕೊಳ್ಳಲು ಮುಂದಾಗಿದ್ದಾರೆ. ತೋಟಗಾರಿಕೆ, ಹಣ್ಣು, ತರಕಾರಿ ಬೆಳೆಯುವುದು, ಹೈನುಗಾರಿಕೆ, ಕುರಿ-ಮೇಕೆ-ಕೋಳಿ ಸಾಕಣೆ ಮಾಡಿ ಯಶಸ್ಸು ಗಳಿಸುತ್ತಿದ್ದಾರೆ.



ಚನ್ನರಾಯಪಟ್ಟಣ ತಾಲೂಕು ನಾಗನಹಳ್ಳಿ ಗ್ರಾಮದಲ್ಲಿರುವ ತಮ್ಮ ಜಮೀನಿನಲ್ಲಿ ಅರಣ್ಯ ಕೃಷಿ ಅಳವಡಿಸಿರುವ ಸಿ.ಮಂಜೇಗೌಡ.

“ನನಗೆ ಚಿಕ್ಕಂದಿನಿಂದಲೂ ಕೃಷಿ ಚಟುವಟಿಕೆ, ಪರಿಸರ ಅಭಿವೃದ್ಧಿ ಬಗ್ಗೆ ಆಸಕ್ತಿ ಇತ್ತು. ಆದರೆ ಸದಾ ಉದ್ಯಮದಲ್ಲಿ ತೊಡಗುತ್ತಿದ್ದರಿಂದ ಸರಿಯಾಗಿ ಅವಕಾಶ ಸಿಕ್ಕಿರಲಿಲ್ಲ. ಈಗ ಪಾಳು ಬಿದ್ದಿದ್ದ ಜಮೀನನ್ನು ಹದಗೊಳಿಸಿ ಕೃಷಿಗೆ ಒತ್ತು ನೀಡುತ್ತಿದ್ದೇನೆ. ಅದರಲ್ಲಿಯೂ ಕಾಡು ಕೃಷಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

| ಸಿ.ಮಂಜೇಗೌಡ
ನಾಗನಹಳ್ಳಿ

ಪಾಳು ಜಮೀನಿನಲ್ಲಿ ಯಶಸ್ವಿ ಕೃಷಿ

■ ಆರ್.ಶ್ರೀನಿವಾಸ್ ಉಳ್ಳಾವಳ್ಳಿ ಚನ್ನರಾಯಪಟ್ಟಣ

ಹಲವು ವರ್ಷಗಳಿಂದ ಉಳುಮೆ ಕಾಣದೆ ಮಂಟಿಕಲ್ಲು ಹಾಗೂ ಕಾರೆ ಮುಳ್ಳಿನ ಗುಚ್ಚಿಯಿಂದ ಕೂಡಿ ಪಾಳು ಬಿದ್ದಿದ್ದ ಜಮೀನಿನಲ್ಲಿ ಉದ್ಯಮಿಯೊಬ್ಬರು ಕೃಷಿ ಮಾಡಿ ಯಶಸ್ಸಿಯಾಗಿರುವುದಲ್ಲದೆ, ಇತರರಿಗೆ ಮಾದರಿ ಎನಿಸಿದ್ದಾರೆ. ಚನ್ನರಾಯಪಟ್ಟಣ ತಾಲೂಕು ಹಿರೀಸಾವೆ ಹೋಬಳಿ ನಾಗನಹಳ್ಳಿ ಗ್ರಾಮದ ಸಿ.ಮಂಜೇಗೌಡ, ಪಾಳು ಬಿದ್ದಿದ್ದ ತಮ್ಮ 15 ಎಕರೆ ಪ್ರದೇಶದಲ್ಲಿ ಅರಣ್ಯಕೃಷಿಗೂ ಆದ್ಯತೆ ನೀಡುತ್ತಿದ್ದಾರೆ. ಬೆಂಗಳೂರಿನಲ್ಲಿ ಉದ್ಯಮಿಯಾಗಿರುವ ಇವರು, ಹಿರೀಸಾವೆ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಸದಸ್ಯರಾಗಿದ್ದರು. ಸದಸ್ಯತ್ವ ಅವಧಿ ಮುಗಿದ ಮೇಲೆ ಕೃಷಿಯತ್ತ ಮುಖ ಮಾಡಿದ್ದು, ಪರಿಸರ ಅಭಿವೃದ್ಧಿಯಲ್ಲಿಯೂ ತೊಡಗಿಸಿಕೊಂಡಿದ್ದಾರೆ.

15 ಎಕರೆ ಜಾಗದಲ್ಲಿ ತರಹೇವಾರಿ ಬೆಳೆ ಬೆಳೆದ ಮಂಜೇಗೌಡ

15 ಎಕರೆ ಪೈಕಿ 5-6 ಎಕರೆ ಜಾಗದಲ್ಲಿ ಶುಂಠಿ ಬೆಳೆ ಆಳವಡಿಸಿದರೆ, ಒಂದಷ್ಟು ಭಾಗದಲ್ಲಿ ನೂರಾರು ತೆಂಗು, ಅಡಕೆ ಹಾಗೂ ಬಾಳೆ ನೆಟ್ಟಿದ್ದಾರೆ. ಉಳಿದ ಜಮೀನಿನಲ್ಲಿ ಮಾವು, ಹಲಸು, ದಾಳಿಂಬೆ, ಚಕ್ಕೆ, ಗಸಗಸೆ, ಏಲಕ್ಕಿ, ಸಪೋಟ, ಸೀತಾಫಲ, ಲಕ್ಷ್ಮಣಫಲ, ಚಕ್ಕೋತ, ನೇರಳೆ, ನಿಂಬೆ, ಯಳ್ಳಿ, ಚೆರ್ರಿ, ಬೆಟ್ಟದ ನೆಲ್ಲಿ, ಸೀಬೆ, ಪಪ್ಪಾಯಿ, ರಾಮಫಲ, ಕಿತ್ತಳೆ, ಹುಣಸೆ, ಮೂಸಂಬಿ, ಬಾದಾಮಿ, ಬಟರ್ ಫ್ರೂಟ್ ಸೇರಿ ವಿವಿಧ ಬಗೆಯ ನೂರಾರು ಹಣ್ಣಿನ ಗಿಡಗಳನ್ನು ನೆಟ್ಟು ಪೋಷಣೆ ಮಾಡುತ್ತಿದ್ದಾರೆ.

ಇವೆಲ್ಲದರ ನಡುವೆ ಸಾವಿರಾರು ಹೆಬ್ಬೇವು, ತೇಗ, ಹೊಂಗೆ, ಸಿಲ್ವರ್, ಮಹಾಘನಿ, ಕಾಡು ಗೋಡಂಬಿ ಹಾಗೂ ಇನ್ನಿತರ ಗಿಡಗಳನ್ನು ನೆಟ್ಟು ಅರಣ್ಯ ಕೃಷಿ ಅಭಿವೃದ್ಧಿಗೂ ಸಾಕಷ್ಟು ಆದ್ಯತೆ ನೀಡಲಾಗಿದೆ. ಜತೆಗೆ ಔಷಧ ಗುಣ ಹೊಂದಿರುವ ನೂರಾರು ಬಗೆಯ ಗಿಡಗಳನ್ನು ಬೆಳೆಸುತ್ತಿದ್ದಾರೆ. ಎಲ್ಲ ಸಸಿಗಳಿಗೂ ಹನಿ ನೀರಾವರಿ ಪದ್ಧತಿಯಲ್ಲಿ ನೀರಿನ ವ್ಯವಸ್ಥೆ ಮಾಡಲಾಗಿದೆ. ಹಸು, ಕುರಿ ಹಾಗೂ ಕೋಳಿ ಸಾಕಣೆಗೂ ಆದ್ಯತೆ ನೀಡಿದ್ದಾರೆ. ನಾಗನಹಳ್ಳಿ, ಪಿ.ಹೊಸಹಳ್ಳಿ ಗ್ರಾಮದ ತೋಪು ಹಾಗೂ ನಿಂಬೇಹಳ್ಳಿ ಗ್ರಾಮದ ರಸ್ತೆ ಬದಿ 2500ಕ್ಕೂ ಹೆಚ್ಚು ಸಸಿಗಳನ್ನು ನೆಟ್ಟು ಹನಿ ನೀರಾವರಿ ಪದ್ಧತಿ ಅಳವಡಿಸಿ ಪೋಷಣೆ ಮಾಡುವ ಮೂಲಕ ಸಿ.ಮಂಜೇಗೌಡ ಪರಿಸರ ಅಭಿವೃದ್ಧಿಗೂ ಆದ್ಯತೆ ನೀಡಿದ್ದಾರೆ.

“ನೂರೆಂಟು ಬಗೆಯ ಸಸಿಗಳನ್ನು ನೆಟ್ಟು ಪೋಷಣೆ ಮಾಡುತ್ತಿರುವ ಮಂಜೇಗೌಡ ಇತರರಿಗೂ ಮಾರ್ಗದರ್ಶಕರಾಗಿದ್ದಾರೆ. ನೀರನ್ನು ಮಿತವಾಗಿ ಬಳಸುವ ಸಲುವಾಗಿ ಹನಿ ನೀರಾವರಿ ಪದ್ಧತಿ ಅಳವಡಿಸಿದ್ದು ಅರಣ್ಯ ಕೃಷಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವುದು ಶ್ಲಾಘನೀಯ.

| ಶಿವೇಗೌಡ ಅರಣ್ಯ ಪ್ರೇರಕ, ಡಿ.ತುಮಕೂರು

ಮಳೆ ನೀರು ಸಂಗ್ರಹಕ್ಕೆ ಕೃಷಿ ಹೊಂಡ



ಮಳೆ ನೀರು ಸಂಗ್ರಹಿಸುವ ಸಲುವಾಗಿ 100 ಅಡಿ ಉದ್ದ, 70 ಅಡಿ ಅಗಲವಾದ ಕೃಷಿ ಹೊಂಡ ನಿರ್ಮಿಸಲಾಗಿದೆ. ಹೊಂಡಕ್ಕೆ ಪಂಪ್‌ಸೆಟ್ ಅಳವಡಿಸಿದ್ದು. ಪೈಪ್‌ಲೈನ್ ಮೂಲಕ ಗಿಡ, ಮರಗಳಿಗೆ ಹನಿ ನೀರಾವರಿ ಪದ್ಧತಿಯೊಂದಿಗೆ ನೀರು ಪೂರೈಕೆ ಮಾಡುವ ವ್ಯವಸ್ಥೆ ಮಾಡಲಾಗಿದೆ. ಕೃಷಿ ಹೊಂಡದಲ್ಲಿ ಹೆಚ್ಚು ನೀರು ಸಂಗ್ರಹಗೊಂಡಿದ್ದು ಅಂತರ್ಜಲ ಚೇತರಿಕೆಯೊಂದಿಗೆ ಕೊಳವೆಬಾವಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಲಭ್ಯವಾಗುತ್ತಿದೆ ಎನ್ನುತ್ತಾರೆ ಮಂಜೇಗೌಡ.

08-11-2021 Vv Pg 11

08-11-2021 Ind exp Pg 10

This farmer promises better income, health from black wheat

HARPREET BAJWA @ Mohali

A builder-turned-farmer in Punjab is growing black wheat, a variety of the foodgrain developed by National Agri-Food Biotechnology Institute (NABI) based here, for health benefits and better earnings.

Forty-five-year-old **Amarpreet Singh Hira**, who is a builder by profession but has a passion for agriculture, is growing the black wheat for the second consecutive year in his farm in Saifalpur village of Ropar district. Talking to this newspaper he says: “Last year for the first time I grew black wheat on just five acres. This year I will grow it on 10 acres.

Hira says the benefits of black wheat include improvement in glycemic control and inflammatory profile in patients with type-II diabetes. “As it is gluten-free, the grain is rich in anthocyanin. This variety of wheat is reported to have between 100 to 200 parts per million (PPM) of anthocyanin while normal wheat has a concentration of just 5 PPM. This makes black wheat a healthy option. Also, it has high iron and zinc content.”



More farmers are visiting Hira's farm to know about the grain variety | EXPRESS



However, the yield of black wheat is less per acre. “The yield of this variety is around 16 quintals per acre as compared to 22 to 24 quintals of normal wheat,” he says.

Besides health benefits, the farmer makes more earning from the grain. “We are selling it for ₹4,500 per quintal in open market as compared to the normal wheat which is sold at ₹1,980 (MSP).

Dr Monica Garg, scientist-E at NABI who developed the variety says: “I have done my PhD from Japan and got the original gremplasam from my professor and crossed it with the Indian wheat at NABI. It took seven years to develop this variety.”